

ಬರಿಗಾಲಲ್ಲಿ ನಡೆದು ಬರುತ್ತಿದ್ದರು ಮಕ್ಕಳು. ಮಧ್ಯಾಹ್ನಕ್ಕೆ ಉಪ್ಪಿಟ್ಟನ್ನು ರುಚಿಕರವಾಗಿ ಸಿದ್ಧಪಡಿಸಿ ತರುತ್ತಿದ್ದರು, ಭಟ್ಟರು. ಮಧ್ಯಾಹ್ನಾನಂತರ ತರಗತಿಗೆ ಗೈರುಹಾಜರಾಗುತ್ತಿದ್ದ ಕೆಲವು ಮಕ್ಕಳಿಗೆ ಶಿಸ್ತಿನ ಕ್ರಮ ಕೈಗೊಳ್ಳುತ್ತಿದ್ದರೂ ಮನಸ್ಸು ಮಾತ್ರ ಮರುಗುತ್ತಿತ್ತು. ಬಡತನದ ಕುಟುಂಬಗಳ ಅದೆಷ್ಟೋ ಮಕ್ಕಳು ಓದಿನಲ್ಲಿ ಆಸಕ್ತಿ ತೋರುತ್ತಿದ್ದುದು, ಹಾಡು ಆಟಪಾಠಗಳತ್ತ ಮನ ಒಲಿದವರು, ಮನೆಯ ಕೃಷಿ, ವ್ಯಾಪಾರ, ಗಾರೆ, ಕೂಲಿ ಇನ್ನಿತರ ಕೆಲಸಗಳಿಗೂ ಸಹಕರಿಸುತ್ತಿದ್ದ ಮಕ್ಕಳು, ಇನ್ನು ಕೆಲವರು ತರಲೆ ತಂಟೆಗಳಲ್ಲೇ ಮುಳುಗಿರುತ್ತಿದ್ದುದು ಎಂದು ಮಕ್ಕಳ ಜಗತ್ತು ವಿಶ್ವರೂಪ ದರ್ಶನ ಮಾಡಿಸುತ್ತಿತ್ತು. ಉತ್ಸಾಹಿಯಲ್ಲದೆ ಏಕೈಕ ಮಹಿಳಾ ಶಿಕ್ಷಕಿ ಎಂಬುದು ಕೂಡ ಕಾರಣವಾಗಿ ಆ ಮಕ್ಕಳೆಲ್ಲ ನನ್ನಲ್ಲಿ ಒಬ್ಬ ಹಿರಿಯಕ್ಕನನ್ನೋ ತಾಯಿಯನ್ನೋ ಕಂಡಂತೆ ನಿರ್ವ್ಯಾಜ ಪ್ರೀತಿಯ ಹೊನಲು ಹರಿಸಿದರು. ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿದ್ದ ಸೀತಾರಾಮಯ್ಯನವರಿಗೆ ಶಾಲಾ ಪ್ರಗತಿಯ ಕುರಿತು ಅತೀವ ಕಳಕಳಿ. ಹಿರಿಯರಾದ ಗೋಪಾಲಗೌಡರು, ಚೂಡಣ್ಣಗೌಡರು, ಕೃಷ್ಣಪ್ಪಗೌಡರು, ಕೃಷ್ಣಭಟ್ಟರು, ಗಫೂರ್ ಸಾಬರು, ಶಿವಲಿಂಗಪ್ಪ ಶೆಟ್ಟರು, ಗಿಡ್ಡೂ ಸಾಬರು ಮುಂತಾದವರೆಲ್ಲರ ಮುಕ್ತ ಸಹಕಾರ. ಶಾಲೆಗೆ ಅಗತ್ಯವಾದ ಕೆಲವು ವಸ್ತುಗಳ ಸಂಗ್ರಹ ದಾನಿಗಳಿಂದ ಮಾಡಿದ ನೆನಪಿದೆ.

ವಾರ್ಷಿಕೋತ್ಸವದ ಸಂದರ್ಭದ ಸಿದ್ಧತೆಗಳಲ್ಲಿ ನಾನೂ ಮಕ್ಕಳಿಗೆ ಅಡಿಗರ 'ನಾವೆಲ್ಲರು ಒಂದೆ ಜಾತಿ ಒಂದೆ ಮತ' ಗೀತೆಯನ್ನು ವೃಂದಗಾನವಾಗಿಯೂ, 'ಹಿಂದೂ ಮುಸ್ಲಿಂ ಅಲಗ್ ಅಲಗ್ ದೋನೋಂ ಕಾ ಮತಲಬ್ ಏಕ್ ಹೈ...' ಮತ್ತು 'ಕೋನೆ ಕೋನೆ ಜಾಕರ್...' ಎಂಬೆರಡು ಕವಾಲಿಗಳನ್ನೂ, 'ಆಹಾ, ಹಂಗಲ್ಲತ್ತ್ಯವ್ವ...' ಎಂಬೊಂದು ಹಾಸ್ಯಮಯ ಸ್ಕಿಟ್ ಇತ್ಯಾದಿ ಕಲಿಸಿಕೊಟ್ಟಿದ್ದೆ ಎಂದು ನೆನಪು. ಅಂದಿನ ಹಾಡು ಡ್ಯಾನ್ಸ್‌ಗಳಿಗೆ ಹಾರ್ಮೋನಿಯಂ ನುಡಿಸಿದವರು, ವಾದ್ಯವೃಂದದ ಮುಖ್ಯಸ್ಥರು ಆದಂ ಸಾಬರು. ಮುಖ್ಯ ಅತಿಥಿಗಳಾಗಿ ವಕೀಲರು, ವಾಗ್ಮಿ, ಶಾಸಕರಾಗಿದ್ದ ಬೇಗಾನೆ ರಾಮಯ್ಯನವರನ್ನು ಕರೆಸಿದ್ದೆವು. ಆ ವರ್ಷದ ಏಳನೇ ತರಗತಿ ಫಲಿತಾಂಶ ಉತ್ತಮವಾಗಿ ಬಂದು ಮನಸ್ಸಿನ ದೃಢತೆ ಹೆಚ್ಚಿಸಿತ್ತು.

ಆ ಊರ ಹಿಂದು ಮುಸ್ಲಿಂ ಸಾಮರಸ್ಯ ನಂದಾದೀಪದಂತೆ ಹಿತವಾದ ಆಪ್ಯಾಯಮಾನತೆಯಿಂದ ಕೂಡಿತ್ತು. ಮುಸ್ಲಿಮರೆಲ್ಲರೂ ಸ್ಫುಟವಾದ ಉಚ್ಚಾರಣೆಯ ಕನ್ನಡ ಮಾತಾಡುತ್ತಿದ್ದರೆ, ಬಹಳಷ್ಟು ಮಂದಿ ಹಿಂದೂಗಳು ನಿರರ್ಗಳವಾಗಿ ಉರ್ದು ಮಾತಾಡುತ್ತಿದ್ದರು. ಒಬ್ಬರ ಮನೆಗಿನ್ನೊಬ್ಬರು ಬಂಧುಗಳಂತೆ ಹೋಗಿ ಬರುವುದಿತ್ತು. ಸಹಜವಾದ ಹಾಸುಹೊಕ್ಕಿನೊಂದಿಗೆ ಸಹೋದರತ್ವದಿಂದ ಬಾಳುತ್ತಿದ್ದ ಊರು.

ನಾನು ಬೆಳಿಗ್ಗೆ ಏಳೂವರೆ ಬಸ್ಸಿಗೆಲ್ಲಾ ಇಲ್ಲಿಗೆ ಬಂದಿರುತ್ತಿದ್ದರೆ ರಾತ್ರಿಯ ಬಸ್ ಕೂಡ ಏಳೂವರೆಗೆ. ಬಿಡುವಿನ ವೇಳೆ ಕಳೆಯಲು ಈ ಊರ ಬಂಧುಗಳಾದ ಕೃಷ್ಣಭಟ್ಟರು–ಇಂದಿರಮ್ಮ, ಸೀತಾರಾಮಯ್ಯ–ನಾಗರತ್ನಮ್ಮ, ಚಂದ್ರಯ್ಯನವರ ಮನೆಗಳಿಗೆ ಹೋಗುತ್ತಿದ್ದೆ. ಮಧ್ಯಾಹ್ನದ ಊಟ ಕ್ಯಾರಿಯರಲ್ಲಿ ವೆಂಕಟೇಶ ಮೇಷ್ಟ್ರ ಮನೆಯಿಂದ ಬರುತ್ತಿತ್ತು. ಅವರು ಕಮ್ಮರಡಿಯಲ್ಲಿ ಮೇಷ್ಟ್ರಾಗಿದ್ದು, ಮಧ್ಯಾಹ್ನದ ಊಟಕ್ಕೆ ಮನೆಗೆ ಬರಬೇಕೆಂಬ ನನ್ನ ತಂದೆತಾಯಿಯ ಆಗ್ರಹಕ್ಕೆ ಈ ನಿಬಂಧನೆ ಮೇಲೆ ಒಪ್ಪಿದ್ದರು. ಬೆಳಿಗ್ಗೆ ಬಸ್ ಇಳಿಯುತ್ತಿದ್ದಂತೆಯೇ ಗಣ್ಯರು ಇಬ್ರಾಹಿಂ ಸಾಬರ ಮನೆಯ ಮಗಳು ಓಡೋಡಿ ಬಂದು ನಸುನಗುತ್ತಾ ನನ್ನ ಕೈಗೆ ಚೈನಾ ಸಂಪಿಗೆ ದಂಡೆ ಇರಿಸುತ್ತಿದ್ದಳು. ಮಧ್ಯಾಹ್ನದ ನನ್ನ ಊಟದ ಸಮಯದಲ್ಲಿ ಕುಡಿವ ನೀರು ತಂದುಕೊಡಲು, ಪೋಸ್ಟಾಫೀಸಿಗೋ, ಅಂಗಡಿಗೋ ಹೋಗಿ ಬರಲು ನಾ ಮುಂದು ತಾ ಮುಂದು ಎಂದು ಪೈಪೋಟಿ ಮಾಡುವ ಮಕ್ಕಳು. ಶಾಲೆಗೆ 'ಡಿ' ದರ್ಜೆ ನೌಕರರಿಲ್ಲದೆ ಎಲ್ಲ ಕೆಲಸ ಸ್ವಯಂ ಆಗಬೇಕಿತ್ತು. ಶಾಲಾವಧಿ ನಂತರ ಎದುರು ಮನೆಯ ಮಗಳೊಬ್ಬಳು ತನ್ನ ಪಿಯುಸಿ ಇಂಗ್ಲಿಷ್ ಪಾಠಕ್ಕೆ ನೆರವು ಕೋರಿ ನನ್ನ ಬಳಿ ಬರುತ್ತಿದ್ದರೆ, ಇನ್ನೊಬ್ಬಾಕೆ ಸಮೀಪದ ಊರಿಂದ ಹಿಂದಿ ರಾಷ್ಟ್ರಭಾಷಾ ಪರೀಕ್ಷೆಯ ಪಾಠಗಳಿಗೆ ನೆರವು ಕೋರಿ ಬರುತ್ತಿದ್ದಳು. ಸುದೀರ್ಘ ಬಿಡುವು ಕಳೆಯುವುದಲ್ಲದೆ ಅವರ ಸ್ನೇಹವೂ ಪ್ರಿಯವಾದುದಾಗಿತ್ತು. ಪಾಠ ಮುಗಿವಾಗ ಎಷ್ಟೇ ತಡವಾದರೂ ನನಗಾಗಿ ಕಾದು ನಿಂತು ಕ್ಲಾಸ್ ರೂಮುಗಳು, ಮುಂಬಾಗಿಲ ಬೀಗ ಜಡಿದು ಹೋಗಲು ಕಾದಿರುತ್ತಿದ್ದರು ಹಿರಿಯ ವಿದ್ಯಾರ್ಥಿಗಳು.

ಮಳೆಗಾಲದ ಒಂದು ದಿನ ಜಡಿಮಳೆಯಿಂದಾಗಿ ರಾತ್ರಿಯ ಬಸ್ ಬರಲಿಲ್ಲ. ಮನೆಗೆ ಹಿಂದಿರುಗದಿದ್ದರೆ ತಂದೆ ತಾಯಿ ಚಿಂತಿತರಾಗುವರು. ಇಲ್ಲಿನ ನನ್ನ ಬಂಧುಗಳು ಕಂಡುಕೊಂಡ ಪರಿಹಾರ, ಊರ ಗಣ್ಯ ಮುಸ್ಲಿಂ ಒಬ್ಬರನ್ನು ಕೋರಿ, ಅವರ ಮನೆಯ ಜೀಪಲ್ಲಿ ನನ್ನನ್ನು ಕಮ್ಮರಡಿಗೆ ಕಳಿಸುವುದು. ಜೀಪ್ ಚಲಾಯಿಸುವ ಅವರ ಮಗ ಇಪ್ಪತ್ತೈದರ ಅವಿವಾಹಿತ ತರುಣ. ನನ್ನನ್ನೂ ಒಳಗೊಂಡು ಯಾರೊಬ್ಬರಿಗೂ ಅಪನಂಬಿಕೆಯ ಸೂಜಿ ಮೊನೆಯಷ್ಟು ಅಂಶವೂ ಇಣುಕಿರಲಿಲ್ಲ. ಕಾರ್ಗತ್ತಲಲ್ಲಿ ಸುರಿವ ಜಡಿಮಳೆಯ ಭೋರೆಂಬ ಶಬ್ದ ಮೀರಿಸಲು ಜೋರು ಧ್ವನಿಯಲ್ಲಿ ಊರು ಶಾಲೆ ತನ್ನ ಶಿಕಾರಿ ವಿಷಯ ಮಾತಾಡುತ್ತಾ ಕಮ್ಮರಡಿಯ ಮನೆ ತಲುಪಿಸಿದ್ದ ಆತನಿಗೆ ನನ್ನನ್ನು ಸುರಕ್ಷಿತವಾಗಿ ಮನೆ ತಲುಪಿಸಿದ್ದಕ್ಕಿಂತ ಮತ್ತ್ಯಾವ ಪ್ರತಿಫಲಾಪೇಕ್ಷೆಯ ಕಿರು ನಿರೀಕ್ಷೆಯೂ ಇರಲಿಲ್ಲ. ತಂದೆತಾಯಿಯೇ ಒತ್ತಾಯಿಸಿ ಒಳಗೆ ಕರೆದು